ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ವಿವಿಪ/ವಿಶೇಷ ಸಭೆ/ 93 /2019–20** **ದಿನಾಂಕ: 05.03.2020**

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 15.02.2020 ರಂದು ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಡಾವಳಿಗಳು.**

***

ದಿನಾಂಕ: 15.02.2020 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
5/3/2020
ಕುಲಸಚಿವರು

ಅಡಕ: ಮೇಲಿನಂತೆ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ ವಿವಿಪ/ 93 / 2019–20** **ದಿನಾಂಕ:05.03.2020.**

ದಿನಾಂಕ 15.02.2020 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಎಸ್. ಜಾಫೆಟ್<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ. ಎಸ್. ಹರೀಶ್ | ಸದಸ್ಯರು |
| 3. | ಡಾ. ಆಶಾ ಗಣೇಶ್ | ಸದಸ್ಯರು |
| 4. | ಡಾ. ಲತಾಕುಮಾರಿ | ಸದಸ್ಯರು |
| 5. | ಡಾ. ಬಿ.ಎ. ಅನುರಾಧಾ | ಸದಸ್ಯರು |
| 6. | ಡಾ. ಆರ್. ಪಾರ್ವತಿ | ಸದಸ್ಯರು |
| 7. | ಡಾ. ಇ. ಬಿ. ರಾಜೇಶ್ | ಸದಸ್ಯರು |
| 8. | ಶ್ರೀ. ಡಿ. ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 9. | ಪ್ರೊ. ಕೆ. ರಮೇಶ್ | ಸದಸ್ಯರು |
| 10. | ಶ್ರೀಮತಿ ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 11. | ಪ್ರೊ. ಕೆ. ಎನ್. ಗೋದಾಮಣಿ | ಸದಸ್ಯರು |
| 12. | ಡಾ. ಎಸ್. ಬಿ ಅನುಪಮಾ | ಸದಸ್ಯರು |
| 13. | ಡಾ. ಎಂ. ಎಸ್. ಮಹಾದೇವ ನಾಯಕ | ಸದಸ್ಯರು |
| 14. | ಡಾ. ವಿ. ಆರ್. ದೇವರಾಜು | ಸದಸ್ಯರು |
| 15. | ಡಾ. ವಿ. ಗಾಯತ್ರಿ | ಸದಸ್ಯರು |

| | | |
|---|---|---|
| 16. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |
| 17. | ಡಾ. ಪಿ. ಆರ್. ಚೇತನ | ಸದಸ್ಯರು |
| 18. | ಡಾ. ಎನ್. ನರಸಿಂಹಮೂರ್ತಿ | ಸದಸ್ಯರು |
| 19. | ಡಾ. ಎಂ. ಮುನಿರಾಜು | ಸದಸ್ಯರು |
| 20. | ವಿತ್ತಾಧಿಕಾರಿಗಳು | ಸದಸ್ಯರು |
| 21. | ಕುಲಸಚಿವರು (ಮೌಲ್ಯಮಾಪನ) ಮತ್ತು ಪ್ರಭಾರ ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ನಿಯಮಗಳ ಪ್ರಕಾರ ಸಭೆ ಪ್ರಾರಂಭಿಸಲು 21 ಸದಸ್ಯರ ಕೊರಮ್ ಅಗತ್ಯವಿದ್ದು, 18 ಜನ ಸದಸ್ಯರು ಉಪಸ್ಥಿತರಿರುವುದರಿಂದ ಸಭೆಯನ್ನು 15 ನಿಮಿಷಗಳ ಅವಧಿಗೆ ಮುಂದೂಡಲಾಯಿತು. 11 ಗಂಟೆ 15 ನಿಮಿಷಕ್ಕೆ ಸಭೆ ಪುನಃ ಸೇರಿದಾಗ 21 ಸದಸ್ಯರು ಉಪಸ್ಥಿತರಿದ್ದು, ಸಭೆ ಪ್ರಾರಂಭಿಸಲಾಯಿತು.

ಕುಲಪತಿಗಳು ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಪ್ರೊ: ಬಿ. ರಮೇಶ್, ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ತುಮಕೂರು ವಿಶ್ವವಿದ್ಯಾಲಯ ಇವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಹುದ್ದೆಗೆ ಸರ್ಕಾರದಿಂದ ನೇಮಕಗೊಂಡು ದಿನಾಂಕ: 30.01.2020 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ವಿಷಯವನ್ನು ಸಭೆಗೆ ತಿಳಿಸಿದರು. ಕುಲಸಚಿವರಾದ ಡಾ. ವಿ. ಶಿವರಾಂ ರವರು ಅನಾರೋಗ್ಯದಿಂದ ರಜೆಯ ಮೇಲೆ ಇರುವುದರಿಂದ ಪ್ರೊ: ಬಿ. ರಮೇಶ್ ರವರು ಪ್ರಭಾರ ಕುಲಸಚಿವರಾಗಿ ಇಂದಿನ ಸಭೆಯಲ್ಲಿ ಕಾರ್ಯನಿರ್ವಹಿಸುತ್ತಾರೆ ಎಂದು ತಿಳಿಸಿ ಅವರಿಗೆ ಆತ್ಮೀಯವಾದ ಸ್ವಾಗತ ಕೋರಿ ಪರಿಚಯ ಮಾಡಿಕೊಳ್ಳಲು ತಿಳಿಸಿದರು.

ಅದರಂತೆ ಪ್ರೊ: ಬಿ. ರಮೇಶ್ ರವರು ತಾವು ತುಮಕೂರು ವಿಶ್ವವಿದ್ಯಾಲಯದ ವಿವಿಧ ಹುದ್ದೆಗಳಲ್ಲಿ ಸಲ್ಲಿಸಿದ ಸೇವೆ, ಅದಕ್ಕೂ ಪೂರ್ವದಲ್ಲಿ ಕುವೆಂಪು ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಿರುವ ಕುರಿತು ಮತ್ತು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ ಕುಲಸಚಿವರಾಗಿ ಸೇವೆ ಸಲ್ಲಿಸಿರುವ ವಿವರಗಳನ್ನು ಸಭೆಗೆ ತಿಳಿಸಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕಮಾಡಿದ ಕರ್ನಾಟಕ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಿ ಸದಸ್ಯರ ಸಹಕಾರ ಕೋರಿದರು.

ನಂತರ ಕುಲಪತಿಗಳು ಬಾಲ್ಡವಿನ್ ಮಹಿಳಾ ಮೆಥೊಡಿಸ್ಟ್ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ: ಲಿಡಿಯಾ ಸ್ಯಾಮ್ಯುವೆಲ್, ಎಂ.ಎಲ್.ಎ. ಅಕಾಡೆಮಿ ಆಫ್ ಹೈಯರ್ ಲರ್ನಿಂಗ್ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ: ಪಿ.ವಿ. ಪದ್ಮಜಾ ಹಾಗೂ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ: ಎಂ.ಎಸ್ ಮಹಾದೇವ ನಾಯಕ ರವರು ಹೊಸದಾಗಿ ನಾಮಕರಣಗೊಂಡಿರುವುದನ್ನು ಸಭೆಗೆ ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಡಾ: ಎಂ.ಎಸ್ ಮಹಾದೇವ್ ನಾಯಕ್ ಹಾಗೂ ಡಾ: ಲಿಡಿಯಾ ಸ್ಯಾಮ್ಯುವೆಲ್ ರವರನ್ನು ಸ್ವಾಗತಿಸಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲು ಪ್ರಭಾರ ಕುಲಸಚಿವರಿಗೆ ಸೂಚಿಸಿದರು.

ಸಭೆಯ ಪ್ರಾರಂಭದಲ್ಲಿ ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿಯವರು ಪ್ರಾಧ್ಯಾಪಕರಾದ ಡಾ. ಎಂ. ಮುನಿನಾರಾಯಣಪ್ಪ ರವರನ್ನು 2 ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡಿರುವುದರಿಂದ ಅವರ ಸದಸ್ಯತ್ವವನ್ನು ಮಧ್ಯದಲ್ಲಿ ಹಿಂಪಡೆದಿರುವದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು. ಕುಲಪತಿಗಳು ವಿವರಣೆ ನೀಡಿ ಡಾ: ಎಂ.ಎಸ್ ಮಹಾದೇವ ನಾಯಕ ರವರು ಮಂಡ್ಯ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಯಾಗಿ ಸರ್ಕಾರದಿಂದ ನಿಯೋಜನೆ ಮೇಲೆ ನೇಮಕಗೊಳ್ಳುವ ಪೂರ್ವದಲ್ಲಿ ಅವರು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ನಾಮಕರಣ ಹೊಂದಿದ್ದರು. ನಿಯೋಜನೆಗೊಂಡ ನಂತರ ಇವರ ಸ್ಥಾನದಲ್ಲಿ ಡಾ. ಎಂ. ಮುನಿನಾರಾಯಣಪ್ಪ ರವರನ್ನು ನಾಮಕರಣ ಮಾಡಲಾಯಿತು. ಡಾ: ಎಂ.ಎಸ್ ಮಹಾದೇವ್ ನಾಯಕ್ ರವರು ಮರಳಿ ಮಾತೃ ಸಂಸ್ಥೆಗೆ ಬಂದಿರುವ ಹಿನ್ನೆಲೆಯಲ್ಲಿ ಸೇವಾ ಹಿರಿತನದ ಮೇಲೆ ಹಾಗೂ ಅವರು 2020 ಅಕ್ಟೋಬರ್ ತಿಂಗಳಲ್ಲಿ ನಿವೃತ್ತಿ ಹೊಂದುತ್ತಿರುವುದರಿಂದ ಅವರನ್ನು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ನಾಮಕರಣ ಮಾಡಲಾಗಿದೆ, ಅಗತ್ಯವಾದರೆ ಈ ಕುರಿತು ಮರುಪರಿಶೀಲಿಸಲಾಗುವುದು ಎಂದು ತಿಳಿಸಿದರು. ಸದಸ್ಯರು, ಚರ್ಚೆಯಲ್ಲಿ ಭಾಗವಹಿಸಿ ಡಾ. ಮುನಿನಾರಾಯಣಪ್ಪ ನವರನ್ನು ಡಾ. ಮಹಾದೇವ ನಾಯಕ್ ರವರ ಸ್ಥಾನದಲ್ಲಿ ನೇಮಕ ಮಾಡಿರುವುದರಿಂದ ಹಾಗೂ ಡಾ. ಮಹಾದೇವ ನಾಯಕ್ ರವರು ನಿಯೋಜನೆಯಿಂದ ವಾಪಸ್ಸು ಬಂದಿರುವುದರಿಂದ ಅವರನ್ನು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ನಾಮಕರಣ ಮಾಡಿರುವುದು ಸರಿಯಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಚರ್ಚೆಯ ನಂತರ ಕುಲಪತಿಗಳು ಕೈಕೊಂಡ ಕ್ರಮ ಸರಿಯಾಗಿದೆ ಎಂದು ಸಭೆ ಅಭಿಪ್ರಾಯ ಪಟ್ಟಿತು.

ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿ ಇದಕ್ಕೆ ತಮ್ಮ ಅಸಮ್ಮತಿ ಸೂಚಿಸಿದರು.

ನಂತರ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

| | |
|---|---|
| ವಿಷಯ ಸಂಖ್ಯೆ–1 | ನಾಲ್ಕು ಸೆಮಿಸ್ಟರ್ ಗಳಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಬೋಧಿಸುವ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪತ್ರ ಸಂಖ್ಯೆ: ಕಅಪ್ರಾ/ಅ/115/2019 ದಿನಾಂಕ 23.12.2019.<br><br>ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪತ್ರದ ಕುರಿತು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಪ್ರಸ್ತುತ ಪಡಿಸಿದರು. ಡಾ. ಎಂ. ಮುನಿರಾಜು ರವರು ವಾಣಿಜ್ಯ ಸ್ನಾತಕ ವ್ಯಾಸಂಗದ 4 ಸೆಮೆಸ್ಟರ್ ಗಳಲ್ಲಿ ಕನ್ನಡ ಒಂದು ಭಾಷೆಯಾಗಿ ಕಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು. ಡಾ. ಆರ್. ಪಾರ್ವತಿ ರವರು ಎಲ್ಲ ಸ್ನಾತಕ ಕೋರ್ಸ್‌ಗಳಲ್ಲಿ ಇಂಗ್ಲೀಷ್ ಕಡ್ಡಾಯವಾಗಿದ್ದು ಕನ್ನಡ ಅಥವಾ ಇತರ ಭಾರತೀಯ ಭಾಷೆಗಳಲ್ಲಿ ಒಂದನ್ನು ಎರಡನೇ ಭಾಷೆಯಾಗಿ ಕಲಿಯಲು ಅವಕಾಶವಿದೆ ಎಂದು ತಿಳಿಸಿದರು. ಡಾ. ಕೆ. ರಮೇಶ್ ರವರು ಹೊರ ರಾಜ್ಯದ ವಿದ್ಯಾರ್ಥಿಗಳು ಅವರು ಪಿ.ಯು.ಸಿ ಯಲ್ಲಿ ಅಭ್ಯಾಸಮಾಡಿರುವ ಭಾಷೆಯನ್ನು ಪದವಿ ಹಂತದಲ್ಲಿ ಕಲಿಯಬೇಕಾಗುತ್ತದೆ ಎಂದು ಹೇಳಿದರು. ಡಾ. ಬಿ. ಎ. ಅನುರಾಧ ರವರು ಈಗಿರುವ ಪಠ್ಯಕ್ರಮ ಹಾಗೂ ಕಲಿಕಾ ಪದ್ದತಿ ಸರಿಯಾಗಿದೆ ಎಂದು ಅಭಿಪ್ರಾಯಪಟ್ಟರು.<br><br>ಡಾ: ಮಹಾದೇವ್ ನಾಯಕ್ ರವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸೂಚನೆಯಂತೆ ಕ್ರಮಕೈಕೊಳ್ಳಲಾಗಿದೆ ಅದರಂತೆ ನಮ್ಮ ವಿಶ್ವವಿದ್ಯಾಲಯ ಸಹ ಕ್ರಮಕೈಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಕುಲಪತಿಗಳು ಕೆಳಗಿನಂತೆ ವಿವರಿಸಿದರು<br><br>ಬೆಂಗಳೂರು ನಗರದಲ್ಲಿ ಕನ್ನಡವನ್ನು ಪೋಷಿಸಿ ಬೆಳೆಸುವಲ್ಲಿ ವಿಶ್ವವಿದ್ಯಾಯಲಯ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಕೆಲವು ಸ್ವಾಯತ್ತ ಮಹಾವಿದ್ಯಾಲಯಗಳು ಹಾಗೂ ಖಾಸಗಿ ಮಹಾವಿದ್ಯಾಲಯಗಳು ಕನ್ನಡ ಭಾಷೆಯ ಕಲಿಕೆಗಾಗಿ ಹೆಚ್ಚಿನ ಆಸಕ್ತಿ ವಹಿಸುತ್ತಿಲ್ಲ, ವಿದ್ಯಾರ್ಥಿಗಳು +2 ಹಂತದಲ್ಲಿ ಕನ್ನಡ ಓದಿದ್ದರೂ ಸಹ ಬೇರೆ ಭಾಷೆಯನ್ನು ಕಲಿಯಲು ಅವಕಾಶ ನೀಡುತ್ತಿರುವದು ಕಂಡುಬಂದಿದೆ. ಕಾರಣ ಕನ್ನಡವನ್ನು ಭಾಷೆಯಾಗಿ ಕಲಿಸುವ ಕುರಿತು ಕೆಳಗಿನ ಅಂಶಗಳ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳಲು ಸಭೆಗೆ ಪ್ರಸ್ತಾಪಿಸಿದರು. ಅದರಂತೆ ಸಭೆ ಕೆಳಗಿನಂತೆ ತೀರ್ಮಾನಿಸಿತು. |

| | |
|---|---|
| ನಿರ್ಣಯ: | ಅ) ಪದವಿ ಪೂರ್ವ ಪರೀಕ್ಷೆಯಲ್ಲಿ ಕನ್ನಡ ವಿಷಯವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿರುವ ವಿದ್ಯಾರ್ಥಿಗಳು ಪದವಿ ವ್ಯಾಸಂಗದ ಒಂದರಿಂದ ನಾಲ್ಕು ಸೆಮೆಸ್ಟರ್‌ಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯವಾಗಿ ಅಭ್ಯಾಸ ಮಾಡತಕ್ಕದ್ದು.<br>ಆ) **CBSE / ICSE** ಯಿಂದ +2 ಹಂತ ತೇರ್ಗಡೆಯಾದ ವಿದ್ಯಾರ್ಥಿಗಳು ಭಾರತೀಯ ಭಾಷೆ ಅಭ್ಯಾಸ ಮಾಡದೇ ಇರುವುದರಿಂದ ಹತ್ತನೇ ತರಗತಿಯಲ್ಲಿ ಓದಿರುವ ಭಾಷೆಯನ್ನು ಪದವಿ ವ್ಯಾಸಂಗದಲ್ಲಿ ಭಾಷೆಯಾಗಿ ಆಯ್ಕೆ ಮಾಡತಕ್ಕದ್ದು.<br>ಇ) ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿ ಪರಿಚಯಿಸಲು ಪ್ರಥಮ ಹಂತದ ಕಲಿಕಾ ಪರಿಕರಗಳನ್ನು ವಿಶ್ವವಿದ್ಯಾಲಯ ಸಿದ್ಧಪಡಿಸಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯನ್ನು ಕಲಿಯಲು ಉತ್ತೇಜನ ನೀಡಲು ಅಗತ್ಯ ಕ್ರಮ ಕೈಕೊಳ್ಳಬೇಕೆಂದು ಹಾಗೂ ಈ ಕುರಿತು ರೂಪುರೇಷೆಗಳನ್ನು ಸಿದ್ಧಪಡಿಸಲು ಪರಿಣಿತರ ಸಮಿತಿ ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.<br><br>ಈ) ಪದವಿ ಹಂತದಲ್ಲಿ ಕನ್ನಡ ಐಚ್ಛಿಕ ವಿಷಯವನ್ನು ಅಭ್ಯಾಸ ಮಾಡಲು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಅಗತ್ಯವಿದೆ. ಈ ಕುರಿತು ಪ್ರಸ್ತುತ ಸನ್ನಿವೇಶಕ್ಕೆ ಪೂರಕವಾದ ಕನ್ನಡ ಐಚ್ಛಿಕ ವಿಷಯದ ಪಠ್ಯಕ್ರಮವನ್ನು ಸಿದ್ಧಪಡಿಸಲು ಹಾಗೂ ಐಚ್ಛಿಕ ಕನ್ನಡವನ್ನು ಒಳಗೊಂಡ ವಿಷಯಗಳ ಗುಂಪು ಗಳನ್ನು **(Combinations)** ಗುರುತಿಸಲು ಪರಿಣಿತರ ಸಮಿತಿ ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. |
| ವಿಷಯ ಸಂಖ್ಯೆ–2 | To ratify the action taken by the University for implementation of revised Syllabus for BVA and MVA Courses from the academic year 2019-20<br><br>ಸದಸ್ಯರಾದ ಡಾ. ಎನ್. ನರಸಿಂಹಮೂರ್ತಿರವರು ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿದ B.Des ಮತ್ತು M.Des ಪದವಿಗಳು ಆರ್ಕಿಟೆಕ್ಚರ್ ವ್ಯಾಸಂಗದ ಅಡಿಯಲ್ಲಿ ಬರುತ್ತವೆ ಎಂದು ತಿಳಿಸಿದರು. |

| | |
|---|---|
| | ಕುಲಪತಿಗಳು ವಿವರಣೆ ನೀಡುತ್ತಾ, ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ B.V.A ಮತ್ತು M.V.A ಪದವಿಗಳನ್ನು ಮಾತ್ರ ನೀಡಲಾಗುತ್ತಿದೆ. ವಿನ್ಯಾಸ ಆಧಾರಿತ ವಿಷಯಗಳನ್ನು ವ್ಯಾಸಂಗ ಮಾಡಲು ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ B.V.A ಬದಲು B.Des ಹಾಗೂ M.V.A ಬದಲು M.Des ಪದವಿಗಳನ್ನು ನೀಡಲು ಹೆಸರು ಬದಲಾವಣೆಗಾಗಿ ಅಧ್ಯಯನ ಮಂಡಳಿ ಶಿಫಾರಸ್ಸು ಮಾಡಿರುತ್ತದೆ. ಈ ಕುರಿತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗಕ್ಕೆ ಪತ್ರ ಬರೆದು ಅವರ ಅನುಮೋದನೆ ನೀಡಿದಲ್ಲಿ ಪರಿಗಣಿಸಬಹುದೆಂದು ಅಲ್ಲಿಯವರೆಗೆ ಎಲ್ಲ ವಿದ್ಯಾರ್ಥಿಗಳಿಗೆ ಪ್ರಸ್ತುತ ನೀಡಲಾಗುತ್ತಿರುವ B.V.A ಮತ್ತು M.V.A ಪದವಿಗಳನ್ನು ಮಾತ್ರ ನೀಡಲಾಗುವದು ಎಂದು ತಿಳಿಸಿದರು<br><br>ಹಿರಿಯ ಸದಸ್ಯರಾದ ಪ್ರೊ. ಕೆ. ಎನ್. ಗೋದಾಮಣಿಯವರು B.V.A ಪಠ್ಯಕ್ರಮದ ಪುಟಗಳ 40 ಮತ್ತು 116 ಗಳಲ್ಲಿರುವ ಅಂಶಗಳು ಒಂದೇ ತರಹ ಇರುವುದರ ಕುರಿತು ಹಾಗೂ ಅಕ್ಷರ ದೋಷಗಳನ್ನು (Spelling mistake) ಅಧ್ಯಯನ ಮಂಡಳಿ ಅಧ್ಯಕ್ಷರು ಸರಿಪಡಿಸಿಕೊಳ್ಳಲು ಸೂಚಿಸಬೇಕೆಂದು ತಿಳಿಸಿದರು. |
| ನಿರ್ಣಯ: | **ಅ) ಅಧ್ಯಯನ ಮಂಡಳಿಯ ಶಿಫಾರಸ್ಸಿನ ಮೇರೆಗೆ B.V.A ಮತ್ತು M.V.A ಪಠ್ಯಕ್ರಮಗಳನ್ನು ಜಾರಿಗೊಳಿಸುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.**<br><br>**ಆ) ವಿನ್ಯಾಸ ಆಧಾರಿತ B.V.A ಮತ್ತು M.V.A ಪದವಿಗಳ ಹೆಸರುಗಳನ್ನು B.Des. ಮತ್ತು M.Des. ಎಂದು ಬದಲಾಯಿಸುವ ಕುರಿತು ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ ಪತ್ರ ಬರೆದು, ಅದರಿಂದ ಅನುಮೋದನೆ ಪಡೆದ ನಂತರ ಮುಂದಿನ ಕ್ರಮ ಕೈಕೊಳ್ಳಬಹುದೆಂದು ಅಲ್ಲಿಯವರೆಗೆ B.V.A ಮತ್ತು M.V.A ಪದವಿಗಳ ಹೆಸರುಗಳನ್ನು ಮುಂದುವರೆಸಬೇಕೆಂದು ತೀರ್ಮಾನಿಸಲಾಯಿತು.** |

| | |
|---|---|
| **ವಿಷಯ ಸಂಖ್ಯೆ–3** | ಎಂ.ಎ ಇತಿಹಾಸ ವ್ಯಾಸಂಗದ 4 ನೇ ಸೆಮಿಸ್ಟರ್ ಪಠ್ಯಕ್ರಮವನ್ನು 2019–20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು<br><br>ಸದಸ್ಯರಾದ ಪ್ರೊ. ವಿ. ಆರ್. ದೇವರಾಜ್ ರವರು ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಉತ್ತರ ಬರೆಯಲು ಅವಕಾಶವಿರುವುದರಿಂದ ಪಠ್ಯಕ್ರಮ ಸಹ ಕನ್ನಡದಲ್ಲಿ ಇರುವದು ಉಚಿತವೆಂದು ಅಭಿಪ್ರಾಯ ಪಟ್ಟರು. ಡಾ. ಇ. ಬಿ. ರಾಜೇಶ್, ಡಾ. ಕೆ. ರಮೇಶ್, ಡಾ. ಡಿ. ಜಿ ಶ್ರೀನಿವಾಸಮೂರ್ತಿ, ಡಾ. ಆರ್ ಪಾರ್ವತಿ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿ ಮಾನವಿಕ ನಿಕಾಯದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಕನ್ನಡದಲ್ಲಿ ಉತ್ತರಗಳನ್ನು ಬರೆಯುವುದರಿಂದ ಪಠ್ಯಕ್ರಮವನ್ನು ಕನ್ನಡದಲ್ಲಿ ನೀಡಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.<br><br>ಡಾ. ಎನ್. ನರಸಿಂಹಮೂರ್ತಿಯವರು ರಾಜ್ಯದ ಯಾವ ವಿಶ್ವವಿದ್ಯಾಲಯದಲ್ಲಿಯೂ ಕನ್ನಡದಲ್ಲಿ ಪಠ್ಯಕ್ರಮ ನೀಡುವ ವ್ಯವಸ್ಥೆ ಇಲ್ಲವೆಂದು ಹಾಗೂ ಕನ್ನಡದಲ್ಲಿ ಪಠ್ಯಕ್ರಮ ಸಿದ್ಧಪಡಿಸುವ ಅಗತ್ಯವಿಲ್ಲವೆಂದು ಹೇಳಿದರು.<br><br>ಡಾ. ಎಂ. ಮುನಿರಾಜು ರವರು ಚರ್ಚೆಯಲ್ಲಿ ಭಾಗವಹಿಸಿ, ವಾಣಿಜ್ಯ ಸ್ನಾತಕ ಹಂತದ 4 ಸೆಮೆಸ್ಟರ್‌ಗಳಲ್ಲಿ ವಿದ್ಯಾರ್ಥಿಗಳು ಕನ್ನಡ ಅಭ್ಯಾಸ ಮಾಡಲು ಅವಕಾಶವಿದೆ. ಸ್ನಾತಕೋತ್ತರ ಹಂತದಲ್ಲಿ ಕನ್ನಡ ಮಾಧ್ಯಮ ಜಾರಿಗೊಳಿಸಿದರೆ, ಅದಕ್ಕಾಗಿ ಒಂದು ಪ್ರತ್ಯೇಕ ಸೆಕ್ಷನ್ (ವಿಭಾಗ) ಪ್ರಾರಂಭಿಸಬೇಕಾಗುತ್ತದೆ ಎಂದು ತಿಳಿಸಿ, ಇದರಿಂದ ಹೆಚ್ಚಿನ ಸಂಖ್ಯೆಯ ಅಧ್ಯಾಪಕರು ಬೇಕಾಗುತ್ತದೆ ಎಂದು ತಿಳಿಸಿದರು.<br><br>ಕುಲಪತಿಗಳು ವಿವರಣೆ ನೀಡುತ್ತಾ, ವಿವಿಧ ಮಾನವಿಕ ಸ್ನಾತಕೋತ್ತರ ವ್ಯಾಸಂಗಗಳ ವಿಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಕನ್ನಡ ಮಾಧ್ಯಮಗಳಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿರುವುದರಿಂದ, ಇಂತಹ ವಿದ್ಯಾರ್ಥಿಗಳಿಗೆ ಅಗತ್ಯವಾದ ಪಠ್ಯ ಪುಸ್ತಕ ಹಾಗೂ ಆಕರ ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ಸಿದ್ಧಪಡಿಸುವ ಅಗತ್ಯವನ್ನು ಮನಗಂಡು, ಪಠ್ಯಪುಸ್ತಕ ಹಾಗೂ ಆಕರ ಗ್ರಂಥಗಳನ್ನು ಸಿದ್ಧಪಡಿಸಲು ಒಂದು ಸಮಿತಿ ರಚಿಸಲಾಗಿದೆ. ಪಠ್ಯಗಳ ಸಿದ್ಧತೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು. |

| | |
|---|---|
| ನಿರ್ಣಯ: | ಪ್ರಾರಂಭದಲ್ಲಿ ವಿಷಯ ಪ್ರಾಸ್ತಾವಿಸಿದ ಡಾ. ವಿ. ಆರ್. ದೇವರಾಜ್ ರವರು ಚರ್ಚೆಯ ಅಂತ್ಯದಲ್ಲಿ ವಿವರಣೆ ನೀಡುತ್ತಾ ಮಾನವಿಕ ನಿಕಾಯದಲ್ಲಿ ವಿದ್ಯಾಥಿಗಳು ಕನ್ನಡ ಮಾಧ್ಯಮದಲ್ಲಿ ಉತ್ತರ ಬರೆಯುವ ಕಾರಣದಿಂದಾಗಿ, ಪಠ್ಯಕ್ರಮ ಕನ್ನಡದಲ್ಲಿ ಇದ್ದರೆ ಅಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ, ಈ ವಿಷಯ ಪ್ರಸ್ತಾಪಿಸಿದ್ದು, ಈ ಕುರಿತು ಪರಿಶೀಲಿಸಿ, ಕನ್ನಡದಲ್ಲಿ ಪಠ್ಯಕ್ರಮ ಸಿದ್ಧಪಡಿಸುವ ವಿಷಯವನ್ನು ಮಾನವಿಕ ನಿಕಾಯದ ವಿವಿಧ ಅಧ್ಯಯನ ಮಂಡಳಿಯ ಅಧ್ಯಕ್ಷರ ವಿವೇಚನೆಗೆ ಬಿಡಬಹುದು ಎಂದು ತಿಳಿಸಿದರು.<br><br>**2019–20 ನೇ ಸಾಲಿನ ಎಂ. ಎ ನಾಲ್ಕನೇ ಸೆಮೆಸ್ಟರ್ ಇತಿಹಾಸ ಪಠ್ಯಕ್ರಮವನ್ನು ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.** |
| **ವಿಷಯ ಸಂಖ್ಯೆ–4** | To consider provisional renewal to recognised subjects for conducting Ph.D programmes in Research Centres of Bengaluru Central University – reg.<br><br>ಸುದೀರ್ಘ ಚರ್ಚೆಯಲ್ಲಿ ಸದಸ್ಯರಾದ ಡಾ. ಎಂ. ಎಸ್. ಮಹಾದೇವ ನಾಯಕ್, ಡಾ. ಎಂ. ನರಸಿಂಹಮೂರ್ತಿ, ಡಾ. ಇ. ಬಿ. ರಾಜೇಶ್, ಡಾ. ಅನುಪಮ ಮತ್ತು ಡಾ. ಕೆ. ರಮೇಶ್ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು.<br><br>ಬೆಂಗಳೂರು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಕೆಲವು ಸಂಶೋಧನಾ ಕೇಂದ್ರಗಳು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಸ್ಥಾಪನೆಯ ನಂತರ ಈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬಂದಿದ್ದು ಇವುಗಳಿಗೆ ವಿಶ್ವವಿದ್ಯಾಲಯ ಸ್ಥಾಪನೆಯಾದ ವರ್ಷದಿಂದ ನವೀಕರಣ ನೀಡಬೇಕಾಗುತ್ತದೆ, ತಜ್ಞರ ಸಮಿತಿ ವರದಿ ಸಲ್ಲಿಸಿದ ನಂತರ ಆಯಾ ಸಂಶೋಧನಾ ಕೇಂದ್ರಗಳಿಗೆ ನವೀಕರಣ ಮುಂದುವರಿಕೆ ನೀಡಬೇಕಾಗುತ್ತದೆ, ಈ ವಿಶ್ವವಿದ್ಯಾಲಯ ಸ್ಥಾಪನೆಯ ಪೂರ್ವದ ಅವಧಿಗೆ ಬೆಂಗಳೂರು ವಿಶ್ವವಿದ್ಯಾಲಯ ನವೀಕರಣ ನೀಡಬೇಕಾಗುತ್ತದೆ ಎಂದು ತಿಳಿಸಿದರು. |

| | |
|---|---|
| | ಸದಸ್ಯರಾದ ಡಾ. ವಿ. ಆರ್. ದೇವರಾಜ್ ರವರು, ಸಿಂಡಿಕೇಟ್ ಸಭೆ ಈಗಾಗಲೇ ಸಂಶೋಧನಾ ಕೇಂದ್ರಗಳ ನವೀಕರಣ ಹಾಗೂ ಹೊಸ ಸಂಶೋಧನಾ ಕೇಂದ್ರಗಳ ಪರಿಶೀಲನೆಗೆ ನಿಗದಿತ ನಮೂನೆಯನ್ನು ಪರಿಷ್ಕರಿಸಲು ಒಂದು ಸಮಿತಿ ರಚಿಸಿದ್ದು, ಆ ಸಮಿತಿಗೆ ಹೊಸ ನಮೂನೆಯನ್ನು ಬೇಗ ಸಿದ್ಧಪಡಿಸಲು ಕೋರಬೇಕೆಂದು ತಿಳಿಸಿದರು. ಹೊಸ ನಮೂನೆ ಸಿದ್ಧವಾದ ನಂತರ ತಜ್ಞರ ಸಮಿತಿಗಳನ್ನು ಕಳುಹಿಸಿ ಅವುಗಳು ನೀಡುವ ವರದಿಯ ಆಧಾರದ ಮೇಲೆ, ನವೀಕರಣಕ್ಕೆ ಅರ್ಹವಾದ ವರ್ಷದಿಂದ ಪೂರ್ವಾನ್ವಯಗೊಳಿಸಿ ನವೀಕರಣ ನೀಡಬಹುದೆಂದು ತಿಳಿಸಿದರು. ಪಿ.ಹೆಚ್.ಡಿ ಮಾರ್ಗದರ್ಶಕರ ಮಾನ್ಯತೆ ನೀಡುವ ಕುರಿತು ಶಿಫಾರಸ್ಸು ಮಾಡುವ ಅಂತಿಮ ಅಧಿಕಾರ ಸಂಬಂಧಿಸಿದ ಅಧ್ಯಯನ ಮಂಡಳಿಗಳು ಹೊಂದಿರುತ್ತವೆ ಎಂದು ತಿಳಿಸಿದರು. ಸರ್ಕಾರಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಬಯೋಟೆಕ್ನಾಲಜಿ ವಿಷಯಕ್ಕೆ ಕುವೆಂಪು ವಿಶ್ವವಿದ್ಯಾಲಯ ಮಾನ್ಯತೆ ನೀಡಿದ್ದು ಅದನ್ನು ಪರಿಗಣಿಸಬಾರದೆಂದು ತಿಳಿಸಿದರು.<br><br>ಡಾ. ಎಂ. ಮುನಿರಾಜು ರವರು ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡುವ ತಜ್ಞರ ಸಮಿತಿಗೆ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು (Guidelines) ಸಿದ್ಧಪಡಿಸಿ ನೀಡಬೇಕೆಂದು ತಿಳಿಸಿದರು. ಡಾ. ಇ. ಬಿ. ರಾಜೇಶ್ ಮತ್ತು ಕೆ. ರಮೇಶ್ ರವರು ಶಿಕ್ಷಣ ವಿಷಯದಲ್ಲಿ ಮಾನ್ಯತೆ ನೀಡಿದ ಮಾರ್ಗದರ್ಶಕರು ಸ್ನಾತಕ ಕೋರ್ಸಿಗೆ ನೇಮಕಾತಿ ಹೊಂದಿದ್ದು ಅವರು ಸ್ನಾತಕೋತ್ತರ ಕೋರ್ಸಿಗೆ ಪಾಠ ಮಾಡುತ್ತಿರುವುದನ್ನು ಖಚಿತ ಪಡಿಸಿಕೊಳ್ಳಬೇಕೆಂದು ತಿಳಿಸಿದರು.<br><br>ಅಂತಿಮವಾಗಿ ಕುಲಪತಿಗಳು, ಪಿ.ಹೆಚ್.ಡಿ. ವ್ಯಾಸಂಗ ವಿಶ್ವವಿದ್ಯಾಲಯಕ್ಕೆ ಕಿರೀಟಪ್ರಾಯವಾಗಿದ್ದು ಇದರಿಂದಾಗಿ ವಿಶ್ವವಿದ್ಯಾಲಯ ಸ್ಥಾಪನೆಯ ಮೂಲ ಆಶೋತ್ತರವಾದ ಸಂಶೋಧನೆಗೆ ಸ್ಪಂದನೆ ನೀಡಿದಂತಾಗುತ್ತದೆ. ಈ ಕಾರಣದಿಂದ ಹಲವಾರು ಇತಿಮಿತಿಗಳಲ್ಲಿ, ಅಧ್ಯಾಪಕ ವೃಂದದ ಒತ್ತಾಯ ಹಾಗೂ ಸಹಕಾರದಿಂದ ಪಿ.ಹೆಚ್.ಡಿ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಿ ಅಂತಿಮ ಹಂತಕ್ಕೆ ಬರಲಾಗಿದೆ. ವಿಜ್ಞಾನ, ಮಾನವಿಕ ಮತ್ತು ಶಿಕ್ಷಣ ನಿಕಾಯದ ವಿಷಯಗಳಲ್ಲಿ ಪ್ರವೇಶಗಳನ್ನು ಪೂರ್ಣಗೊಳಿಸಲಾಗಿದೆ. ವಾಣಿಜ್ಯ ವಿಷಯದ ಪ್ರವೇಶ ಅಂತಿಮ ಹಂತದಲ್ಲಿ ಇದೆ. ನಿರ್ವಹಣೆ ವಿಷಯದ ಪ್ರವೇಶಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿ ವಿಶ್ವವಿದ್ಯಾಲಯ ಕೈಕೊಂಡ ಕ್ರಮ ಹಾಗೂ ನೀಡಲಾದ ಪ್ರವೇಶಗಳಿಗೆ |

| | |
|---|---|
| | ಒಪ್ಪಿಗೆ ನೀಡುವಂತೆ ಕೋರಿದರು. ಸಂಶೋಧನಾ ಕೇಂದ್ರಗಳ ನವೀಕರಣಕ್ಕೆ ಸಿಂಡಿಕೇಟ್ ಸಮಿತಿ ಸಿದ್ಧಪಡಿಸುವ ನಮೂನೆಯನ್ನು ಉಪಯೋಗಿಸಿ ಈ ಕುರಿತು ರಚಿಸುವ ತಜ್ಞರ ಸಮಿತಿ ನೀಡುವ ವರದಿಯ ಪ್ರಕಾರ ಕ್ರಮ ಕೈಕೊಳ್ಳಲಾಗುವುದೆಂದು ತಿಳಿಸಿದರು. |
| ನಿರ್ಣಯ: | **1. ವಿಶ್ವವಿದ್ಯಾಲಯ ಪಿ.ಹೆಚ್.ಡಿ. ಪ್ರವೇಶ ನೀಡುವ ಕುರಿತು ಕೈಕೊಂಡ ಕ್ರಮಗಳಿಗೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.**<br>**2. ಸಂಶೋಧನಾ ಕೇಂದ್ರಗಳ ನವೀಕರಣಕ್ಕೆ ಸಿಂಡಿಕೇಟ್ ಸಮಿತಿ ಸಿದ್ಧಪಡಿಸುವ ನಮೂನೆ ಹಾಗೂ ತಜ್ಞರ ಸಮಿತಿ ನೀಡುವ ವರದಿಯ ಆಧಾರದ ಮೇಲೆ ಈ ವಿಶ್ವವಿದ್ಯಾಲಯ ಪ್ರಾರಂಭವಾದ ವರ್ಷದಿಂದ ಅನ್ವಯಿಸಿ ಮಾನ್ಯತೆ ನವೀಕರಣಗೊಳಿಸಲು ಕ್ರಮ ಕೈಕೊಳ್ಳಬಹುದೆಂದು ತೀರ್ಮಾನಿಸಲಾಯಿತು.**<br>**3. ಸಿಂಡಿಕೇಟ್ ಸಮಿತಿ ಸಂಶೋಧನಾ ಕೇಂದ್ರಗಳ ನವೀಕರಣ ಹಾಗೂ ಹೊಸ ಸಂಶೋಧನಾ ಕೇಂದ್ರಗಳ ಮಾನ್ಯತೆ ಹಾಗೂ ಮಾರ್ಗದರ್ಶಕರ ಮಾನ್ಯತೆ ನೀಡುವ ಕುರಿತಂತೆ. ಅಗತ್ಯ ನಮೂನೆ ಹಾಗೂ ನಿಯಮಾವಳಿಗಳನ್ನು ರಚಿಸುವಂತೆ ವಿನಂತಿಸಲು ತೀರ್ಮಾನಿಸಲಾಯಿತು.**<br>**4. ಪಿ.ಹೆಚ್.ಡಿ ಮಾರ್ಗದರ್ಶಕರ ಮಾನ್ಯತೆ ಕುರಿತಂತೆ ಚರ್ಚಿಸಲು ಎಲ್ಲಾ ಅಧ್ಯಯನ ಮಂಡಳಿಗಳ ಅಧ್ಯಕ್ಷರ ಸಭೆ ಕರೆಯಬೇಕೆಂದು ಕುಲಸಚಿವರು (ಮೌಲ್ಯಮಾಪನ) ರವರಿಗೆ ಸೂಚಿಸಲಾಯಿತು.** |
| ವಿಷಯ ಸಂಖ್ಯೆ-5 | ಸರ್ಕಾರದ ಪತ್ರ ಸಂಖ್ಯೆ: ಇಡಿ 457 ಯುಬಿವಿ 2018 ದಿನಾಂಕ 29.09.2018 ರ ನಿರ್ದೇಶನದ ಪ್ರಕಾರ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ವಿಷಯಗಳಿಗೆ Choice Based Credit System (Semester Scheme) ಅಡಿಯಲ್ಲಿ ವಿನಿಯಮಗಳನ್ನು (Regulations) ಸಿದ್ಧಪಡಿಸುವ ಕುರಿತು.<br><br>ಕರಡು ವಿನಿಯಮಗಳನ್ನು ಕುರಿತು ಕುಲಪತಿಗಳು ವಿವರಣೆ ನೀಡಿ, ಸರ್ಕಾರಕ್ಕೆ ಸಲ್ಲಿಸಿದ ವಿನಿಯಮದಲ್ಲಿ ಸೂಚಿಸಿದ ಬದಲಾವಣೆಗಳನ್ನು ಹಾಗೂ ಹೊಸ ಕೋರ್ಸುಗಳನ್ನು ಸೇರಿಸಿಕೊಂಡು ವಿನಿಯಮಕ್ಕೆ ಅಗತ್ಯ ಮಾರ್ಪಾಡು ಮಾಡಿ ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆ ಕೋರಿದರು. |

| | |
|---|---|
| | ಸದಸ್ಯರಾದ ಡಾ. ಇ. ಬಿ. ರಾಜೇಶ್, ಡಾ. ಕೆ. ರಮೇಶ್ ಮತ್ತು ಪ್ರೊ. ಡಿ. ಜಿ. ಶ್ರೀನಿವಾಸ ಮೂರ್ತಿ ಅವರು ವಿಶ್ವವಿದ್ಯಾಲಯದಲ್ಲಿ ಎಂ.ಎಡ್ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಬೇಕೆಂದು ಹಾಗೂ ಇದಕ್ಕಾಗಿ ಶಿಕ್ಷಣ ಸ್ನಾತಕೋತ್ತರ ವಿಭಾಗವನ್ನು ಪ್ರಾರಂಭಿಸಲು ಕ್ರಮ ಕೈಕೊಳ್ಳಬೇಕೆಂದು ವಿನಂತಿಸಿದರು. ಕುಲಪತಿಗಳು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿ ಈ ಕುರಿತು ಸರ್ಕಾರಕ್ಕೆ ಇನ್ನೊಂದು ಕೋರಿಕೆ ಸಲ್ಲಿಸುವುದಾಗಿ ತಿಳಿಸಿದರು. |
| ನಿರ್ಣಯ: | 1. ಸಿ.ಬಿ.ಸಿ.ಎಸ್. ಅಡಿಯಲ್ಲಿ ಸ್ನಾತಕೋತ್ತರ ಕೋರ್ಸುಗಳ ಕರಡು ವಿನಿಯಮಗಳಿಗೆ ಅನುಮೋದನೆ ನೀಡಲಾಯಿತು.<br>2. ವಿಶ್ವವಿದ್ಯಾಲಯದಲ್ಲಿ ಅಸ್ತಿತ್ವದಲ್ಲಿ ಇಲ್ಲದೆ ಇರುವ ಹಾಗೂ ಭವಿಷ್ಯದಲ್ಲಿ ಪ್ರಾರಂಭಿಸುವ ಸಾಧ್ಯತೆ ಇಲ್ಲದೆ ಇರುವ ವಿಷಯಗಳನ್ನು ವಿನಿಯಮದಿಂದ ಕೈ ಬಿಡುವ ಹಾಗೂ ಕನ್ನಡ ಎಂ.ಎ ಪ್ರವೇಶದ ಅರ್ಹತೆಯಲ್ಲಿ **B.Sc** ಮತ್ತು **B.Com** ನಲ್ಲಿ ಕನ್ನಡ ವಿಷಯ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಕನ್ನಡ ರತ್ನ ಅಥವಾ ಪಂಡಿತ ಪರೀಕ್ಷೆ ಪಾಸು ಮಾಡಬೇಕೆಂಬ ಅಂಶವನ್ನು ಕೈಬಿಡಬೇಕೆಂದು ಸಭೆ ತೀರ್ಮಾನಿಸಿತು.<br>3. ಕರಡು ವಿನಿಯಮಗಳಲ್ಲಿ ಅಗತ್ಯ ತಿದ್ದುಪಡಿ ಹಾಗೂ ಸರ್ಕಾರ ಸೂಚಿಸಿರುವ ಹಾಗೂ ಬರುವ ಶೈಕ್ಷಣಿಕ ವರ್ಷದಿಂದ ಸರ್ಕಾರ ಅನುಮತಿಸಿರುವ ಹೊಸ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹತೆ ಹಾಗೂ **Scheme of Examination** ಇತ್ಯಾದಿಗಳನ್ನು ಸೇರ್ಪಡೆ ಮಾಡಲು ಕೆಳಕಂಡ ಸದಸ್ಯರ ಸಮಿತಿ ರಚಿಸಲಾಯಿತು.<br>1. ಪ್ರೊ. ಬಿ. ರಮೇಶ್<br>ಕುಲಸಚಿವರು(ಮೌಲ್ಯಮಾಪನ) — ಅಧ್ಯಕ್ಷರು<br>2. ಡಾ. ಎಂ. ಮುನಿರಾಜು<br>ಡೀನರು, ವಾಣಿಜ್ಯ ನಿಕಾಯ — ಸದಸ್ಯರು<br>3. ಡಾ. ಎಂ. ಎಸ್. ಮಹಾದೇವ ನಾಯಕ್<br>ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ — ಸದಸ್ಯರು |

| | |
|---|---|
| | **4. ಡಾ. ವಿ. ಆರ್. ದೇವರಾಜ್**<br>**ಪ್ರಾಧ್ಯಪಕರು, ಜೀವರಾಸಯಶಾಸ್ತ್ರ ವಿಭಾಗ** **ಸದಸ್ಯರು**<br><br>**5. ಡಾ. ಎಸ್. ಆರ್. ಕೇಶವ** **ಸದಸ್ಯರು**<br>**ಪ್ರಾಧ್ಯಪಕರು, ಅರ್ಥಶಾಸ್ತ್ರ ವಿಭಾಗ**<br>**ಬೆಂಗಳೂರು ವಿಶ್ವವಿದ್ಯಾಲಯ,**<br>**ಬೆಂಗಳೂರು–560056** |
| ವಿಷಯ ಸಂಖ್ಯೆ–6 | Regulations Governing the Entrance Test for Post Graduate Degree admissions in the Faculties of Arts, Science, Commerce and Education at Bengaluru Central University.<br>ಡಾ. ವಿ. ಆರ್. ದೇವರಾಜ್ ರವರು ಕಳೆದ ವರ್ಷದ ಸ್ನಾತಕೋತ್ತರ ಪ್ರವೇಶಗಳ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಹಿನ್ನೆಲೆಯಲ್ಲಿ, ಕಳೆದ ವರ್ಷದ ಸ್ನಾತಕೋತ್ತರ ಪ್ರವೇಶ ಪರೀಕ್ಷೆಯ ಅನುಭವವನ್ನು ಸಭೆಗೆ ವಿವರಿಸಿದರು, ವಿಜ್ಞಾನ ಮತ್ತು ವಾಣಿಜ್ಯ ನಿಕಾಯದ ವಿಷಯಗಳಿಗೆ ಪ್ರವೇಶ ಪರೀಕ್ಷೆಯಿಂದ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯಲ್ಲಿ ಯಾವ ತೊಂದರೆ ಆಗಲಿಲ್ಲ ಆದರೆ, ಮಾನವಿಕ ನಿಕಾಯದ ವಿಷಯಗಳಲ್ಲಿ ನಿಗದಿತ ಸಂಖ್ಯೆಯ ಪ್ರವೇಶಗಳು ಆಗದೇ ಇರುವ ಹಿನ್ನಲೆಯಲ್ಲಿ 2–3 ಸಲ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ ನಡೆಸಬೇಕಾಯಿತು. ಅಂತಿಮವಾಗಿ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಪ್ರವೇಶ ನೀಡಬೇಕಾಯಿತು ಎಂದು ತಿಳಿಸಿದರು. ಬೇರೆ 2 ವಿಶ್ವವಿದ್ಯಾಲಯಗಳು ಪ್ರವೇಶ ಪರೀಕ್ಷೆ ಇಲ್ಲದೇ ನೇರವಾಗಿ ಪ್ರವೇಶ ನೀಡಿದ ಕಾರಣದಿಂದಾಗಿ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪ್ರವೇಶ ಪಡೆದ ವಿದ್ಯಾರ್ಥಿಗಳು ಪ್ರವೇಶ ರದ್ದುಪಡಿಸಿಕೊಂಡು ಬೇರೆ ವಿಶ್ವವಿದ್ಯಾಲಯಗಳಿಗೆ ಸೇರಿಕೊಂಡರು. ಹೀಗಾಗಿ ಪ್ರವೇಶ ಪರೀಕ್ಷೆಯಿಂದಾಗಿ ಮಾನವಿಕ ನಿಕಾಯದ ವಿಷಯಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಈ ವಿಭಾಗಗಳಿಗೆ ಹೆಚ್ಚಿನ ಉಪಯೋಗವಾಗಲಿಲ್ಲ ಎಂದು ತಿಳಿಸಿದರು.<br><br>ಸದಸ್ಯರಾದ ಡಾ. ಎಸ್ ಹರಿಪ್ರಸಾದ್ ರವರು ಪ್ರವೇಶ ಪರೀಕ್ಷೆಯಿಂದಾಗಿ ಪ್ರತಿಭಾವಂತ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.<br><br>ಡಾ. ಎಂ. ಮುನಿರಾಜು ರವರು ಮಾತನಾಡಿ, ಪ್ರವೇಶ ಪರೀಕ್ಷೆಯಿಂದಾಗಿ ವಾಣಿಜ್ಯ ವಿಭಾಗದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಎಂದು ತಿಳಿಸಿದರು. 2020–21 ನೇ ಶೈಕ್ಷಣಿಕ |

| | |
|---|---|
| | ವರ್ಷದ ವರೆಗೆ ಮಾತ್ರ ಮೂರು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಸಾಧ್ಯವಾಗುತ್ತದೆ. ಆ ನಂತರ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಈ ವಿಶ್ವವಿದ್ಯಾಲಯದಲ್ಲಿಯೇ ಪ್ರವೇಶ ಪಡೆಯಬೇಕಾಗುತ್ತದೆ.2020-21 ನೇ ಸಾಲಿಗೆ ಮಾತ್ರ ಅರ್ಹತಾ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ಪ್ರವೇಶ ನೀಡಿ ಆನಂತರ ಪ್ರವೇಶ ಪರೀಕ್ಷೆ ಜಾರಿಗೊಳಿಸಬೇಕೆಂದು ತಿಳಿಸಿದರು.<br><br>ಕುಲಸಚಿವರು (ಮೌಲ್ಯಮಾಪನ) ಪ್ರೊ. ಬಿ. ರಮೇಶ್ ಚರ್ಚೆಯಲ್ಲಿ ಭಾಗವಹಿಸಿ, ಮೈಸೂರು ವಿಶ್ವವಿದ್ಯಾಲಯನ್ನು ಹೊರತುಪಡಿಸಿ ಬೇರೆ ಯಾವ ವಿಶ್ವವಿದ್ಯಾಲಯವು ಪ್ರವೇಶ ಪರೀಕ್ಷೆ ನಡೆಸುತ್ತಿಲ್ಲ, ಪ್ರವೇಶ ಸಂಖ್ಯೆಯ ಮಿತಿಗಿಂತ ಹೆಚ್ಚಿನ ಸಂಖ್ಯೆಯ ಅರ್ಜಿಗಳು ಸ್ವೀಕರಿಸಿದಾಗ ಮಾತ್ರ ಪ್ರವೇಶ ಪರೀಕ್ಷೆ ನಡೆಸುವುದರಲ್ಲಿ ಅರ್ಥವಿರುತ್ತದೆ ಎಂದು ಹೇಳಿದರು. ಚರ್ಚೆಯ ನಂತರ ಕೆಳಗಿನಂತೆ ತೀರ್ಮಾನಿಸಲಾಯಿತು. |
| ನಿರ್ಣಯ: | **1. ಪ್ರವೇಶ ಪರೀಕ್ಷೆಯ ವಿನಿಯಮಗಳನ್ನು ಸಧ್ಯಕ್ಕೆ ಕೈಬಿಡಲು ತೀರ್ಮಾನಿಸಲಾಯಿತು.**<br>**2. 2020-21 ನೇ ಸಾಲಿನ ಸ್ನಾತಕೋತ್ತರ ಪ್ರವೇಶಗಳನ್ನು ಹಿಂದಿನಂತೆ ಆಯಾ ವ್ಯಾಸಂಗಗಳಿಗೆ ನಿಗದಿ ಪಡಿಸಿದ ಅರ್ಹತಾ (ಸ್ನಾತಕ) ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಪ್ರವೇಶ ನೀಡಬೇಕೆಂದು ತೀರ್ಮಾನಿಸಲಾಯಿತು.** |
| ವಿಷಯ ಸಂಖ್ಯೆ-7 | ಎಂ.ಎ ಕನ್ನಡ ವ್ಯಾಸಂಗದ 4 ನೇ ಸೆಮಿಸ್ಟರ್ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು |
| ನಿರ್ಣಯ: | **ಎಂ. ಎ. ಕನ್ನಡ ವ್ಯಾಸಂಗದ 4ನೇ ಸೆಮಿಸ್ಟರ್ ಪಠ್ಯಕ್ರಮನ್ನು 2019-20 ಸಾಲಿನಲ್ಲಿ ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.** |
| ಸಮಾನ್ಯ ವಿಷಯಗಳ ಚರ್ಚೆ | ಸದಸ್ಯರಾದ ಡಾ. ಎಸ್. ಹರಿಪ್ರಸಾದ್‌ರವರು ಕುಲಪತಿಗಳ ಅನುಮತಿ ಪಡೆದು ರಸಾಯನಶಾಸ್ತ್ರ ವಿಭಾಗದ ಅಧ್ಯಾಪಕರ ಕೊರತೆ ಕುರಿತು ಕೆಳಗಿನಂತೆ ಪ್ರಸ್ತಾಪಿಸಿದರು.<br><br>"ರಸಾಯನ ಶಾಸ್ತ್ರ ವಿಭಾಗ 1908 ರಲ್ಲಿ ಪ್ರಾರಂಭವಾಗಿದ್ದು ಇದು ಅತ್ಯಂತ ಹಳೆಯ ವಿಭಾಗವಾಗಿರುತ್ತದೆ. ಈ ವಿಭಾಗದಿಂದ ಅಂತರರಾಷ್ಟ್ರೀಯ ಮಾನ್ಯತೆ ಪಡೆದ ಖ್ಯಾತ ವಿಜ್ಞಾನಿಗಳು ಹೊರಬಂದಿದ್ದಾರೆ. ಈ ವಿಭಾಗದಲ್ಲಿ ಕೈಕೊಂಡ ಹಲವಾರು ಸಂಶೋಧನಾ ಯೋಜನೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುತ್ತವೆ. ಇಂತಹ ಪ್ರತಿಷ್ಠಿತ ವಿಭಾದಲ್ಲಿ ಹಿಂದೆ 34 ಜನ |

| | |
|---|---|
| | ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದರು. ಈಗ ಕೇವಲ 5 ಜನ ಇದ್ದೇವೆ ಎಂದು ತಿಳಿಸಿದರು. ರಸಾಯನಶಾಸ್ತ್ರ ವಿಭಾಗದಲ್ಲಿ 3 ಸ್ನಾತಕೋತ್ತರ ಕೋರ್ಸ್‌ಗಳಿದ್ದು (Organic, Inorganic ಮತ್ತು Physical Chemistry) ಈ ಮೂರು ವಿಭಾಗಗಳಲ್ಲಿ ಪ್ರತ್ಯೇಕವಾಗಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ ಕಾರಣ ಅಧ್ಯಾಪಕರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳುವಾಗ 3 ವಿಭಾಗಗಳೆಂದು ಪರಿಗಣಿಸಿ, 3 ಜನ ಪ್ರಾಧ್ಯಾಪಕರು 6 ಜನ ಸಹ ಪ್ರಾಧ್ಯಾಪಕರು ಹಾಗೂ 12 ಜನ ಸಹಾಯಕ ಪ್ರಾಧ್ಯಾಪಕರ ಸಂಖ್ಯೆ ಪರಿಗಣಿಸಬೇಕಾಗುತ್ತದೆ. ಈ ಲೆಕ್ಕದಲ್ಲಿ 21 ಜನ ಕನಿಷ್ಠ ಬೋಧಕವರ್ಗದ ಅವಶ್ಯಕತೆ ಇದೆ. ಅತಿಥಿ ಉಪನ್ಯಾಸಕರ ವ್ಯವಸ್ಥೆ ತಾತ್ಕಾಲಿಕವಾಗಿದ್ದು ಅವರು ಖಾಯಂ ಆಗಿ ಉಳಿದುಕೊಳ್ಳುವುದಿಲ್ಲ. ಆದ್ದರಿಂದ ಗುಣಾತ್ಮಕ ಶಿಕ್ಷಣ ಸಿಗುವುದಿಲ್ಲವೆಂದು ತಿಳಿಸಿದರು. ಇಂತಹ ಪ್ರತಿಷ್ಠಿತ ವಿಭಾಗದ ಘನತೆ ಉಳಿಸಿಕೊಳ್ಳಲು ಕುಲಪತಿಗಳು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಅಗತ್ಯವಾದ ಹುದ್ದೆಗಳ ಮಂಜೂರಾತಿಗಾಗಿ ಪ್ರಯತ್ನಿಸಬೇಕೆಂದು ವಿನಂತಿಸಿದರು.<br><br>ಕುಲಪತಿಗಳು, ಡಾ. ಹರಿಪ್ರಸಾದ್ ರವರ ಭಾವನೆಗಳಿಗೆ ಸ್ಪಂದಿಸಿ, ವಿಶ್ವವಿದ್ಯಾಲಯ ವಿಭಜನೆ ಆದ ಸಂದರ್ಭದಲ್ಲಿ ಸೆಂಟ್ರಲ್ ಕಾಲೇಜ್ ಆವರಣದಲ್ಲಿರುವ ಸ್ನಾತಕೋತ್ತರ ವಿಭಾಗಗಳ ಒಟ್ಟು 86 ಶಿಕ್ಷಕರ ಹುದ್ದೆಗಳನ್ನು ಈ ವಿಶ್ವವಿದ್ಯಾಲಯಕ್ಕೆ ಹಂಚಿಕೆ ಮಾಡದೇ ಇರುವುದರಿಂದ ಇಂದು ಈ ಸಮಸ್ಯೆ ಎದುರಿಸಬೇಕಾಗಿದೆ ಎಂದು ತಿಳಿಸಿದರು. ಸದಸ್ಯರ ಅನಿಸಿಕೆಗಳಿಗೆ ತಮ್ಮ ಸಂಪೂರ್ಣ ಸಹಮತ ವ್ಯಕ್ತಪಡಿಸಿ, ಈ ಕುರಿತು ಸರ್ಕಾರಕ್ಕೆ ಮತ್ತೊಮ್ಮೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂದು ತಿಳಿಸಿದರು. |

ಸದಸ್ಯ ಕಾರ್ಯದರ್ಶಿಗಳು ಎಲ್ಲಾ ಸದಸ್ಯರು ಸಭೆಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

**ಸಹಿ/-**
**ಕುಲಸಚಿವರು**

**ಸಹಿ/-**
**ಕುಲಪತಿಗಳು**

**ಕುಲಸಚಿವರು**
**ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ**